**ಠೇವಣಿಗಳ ಮೇಲಿನ ಬಡ್ಡಿ ದರಗಳು**
**ಭಾರತೀಯ ರಿಸರ್ವ್ ಬ್ಯಾಂಕು**
**ಕೇಂದ್ರ ಕಚೇರಿ**
**ಬ್ಯಾಂಕಿಂಗ್ ಕಾರ್ಯಾಚರಣೆಗಳ ಇಲಾಖೆ ಮತ್ತು ಅಭಿವೃದ್ಧಿ ಕೇಂದ್ರ-೧**
**ವಿಶ್ವ ವ್ಯಾಪಾರ ಕೇಂದ್ರ, ಕಫೇ ಪರೇಡ್, ಕೊಲಾಬಾ**
**ಮುಂಬೈ-೪೦೦೦೦೫**

ಡಿಬಿಒಡಿ.ಡಿಐಆರ್.ಬಿಸಿ. ೧೫೪/೧೩.೦೩.೦೦/೨೦೦೦ ಏಪ್ರಿಲ್ ೧, ೨೦೦೦

ಎಲ್ಲ ವಾಣಿಜ್ಯ ಬ್ಯಾಂಕುಗಳಿಗೆ,
(ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಸೇರಿದಂತೆ)

ಮಾನ್ಯರೇ,

**ಠೇವಣಿಗಳ ಮೇಲಿನ ಬಡ್ಡಿ ದರ**

ಕಾಲಕಾಲಕ್ಕೆ ತಿದ್ದುಪಡಿಯಾಗಿರುವ ನಮ್ಮ ಮಾರ್ಗದರ್ಶಕ ಸೂಚನೆ ಡಿಬಿಒಡಿ.ಸಂಖ್ಯೆ. ಡಿಐಆರ್.ಬಿಸಿ. ೧೫೧/ಸಿ.೩೪೭/೮೫, ದಿನಾಂಕ ಡಿಸೆಂಬರ್ ೨೭, ೧೯೮೫ನ್ನು ದಯವಿಟ್ಟು ನೋಡಿ.

೨. ದೇಶೀಯ ಮತ್ತು ಸಾಮಾನ್ಯ ಅನಿವಾಸಿ ಉಳಿತಾಯ ಠೇವಣಿಗಳ ಮೇಲಿನ ಹಾಗೂ ಅನಿವಾಸಿ (ಬಾಹ್ಯ) ಖಾತೆಗಳ ಯೋಜನೆಯ ಅಡಿಯಲ್ಲಿನ ಉಳಿತಾಯ ಠೇವಣಿಗಳ ಮೇಲಿನ ಬಡ್ಡಿಯ ದರವನ್ನು ಏಪ್ರಿಲ್ ೧, ೨೦೦೦ ದಿಂದ ಜಾರಿಗೆ ಬರುವಂತೆ ವರ್ಷಕ್ಕೆ ಶೇ. ೪.೫ ರಿಂದ ಶೇ. ೪.೦ ಕ್ಕೆ ಶೇ. ೦.೫ರಷ್ಟು ಇಳಿಸಲು ನಿರ್ಧರಿಸಲಾಗಿದೆ.

೩. ಈ ಬಗ್ಗೆ ಕಾಲಕಾಲಕ್ಕೆ ನೀಡಲಾಗಿರುವ ಇತರ ಎಲ್ಲ ಸೂಚನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

೪. ತಿದ್ದುಪಡಿ ಮಾಡುವ ಮಾರ್ಗದರ್ಶಕ ಸೂಚನೆ ಡಿಬಿಒಡಿ.ಸಂಖ್ಯೆ ಡಿಐಆರ್.ಬಿಸಿ ೧೫೭/೧೩.೦೩.೦೦/೨೦೦೦ ದಿನಾಂಕ ಏಪ್ರಿಲ್ ೧, ೨೦೦೦ನ್ನು ಲಗತ್ತಿಸಲಾಗಿದೆ.

೫. ಸೂಚನೆಗಳ ಕೈಪಿಡಿ ಸಂಪುಟ-೧-ಭಾಗ-ಖ ರ ೯ನೇ ಅಧ್ಯಾಯದ ಹಾಲಿ ಇರುವ ಅನುಬಂಧವನ್ನು (ಅನುಬಂಧ-ಖಖಕ್ಕೆ) ಸ್ಲಿಪ್-೧೩ರ ಪ್ರಕಾರ ತಿದ್ದುಪಡಿಮಾಡತಕ್ಕದ್ದು.

೬. ತಲುಪಿದ್ದಕ್ಕೆ ದಯವಿಟ್ಟು ಸ್ವೀಕೃತಿ ನೀಡಿ.

ತಮ್ಮ ವಿಶ್ವಾಸಿ,

(ಪಿ.ವಿ. ಸುಬ್ಬರಾವ್)
ಮುಖ್ಯ ಪ್ರಧಾನ ವ್ಯವಸ್ಥಾಪಕರು

ಲಗತ್ತುಗಳು: ಮೇಲಿನಂತೆ.

ಡಿಬಿಒಡಿ. ಸಂಖ್ಯೆ. ಡಿಐಆರ್. ಬಿಸಿ.೧೫೭/೧೩.೦೩.೦೦/೨೦೦೦ ಏಪ್ರಿಲ್ ೧, ೨೦೦೦

## ಠೇವಣಿಗಳ ಮೇಲಿನ ಬಡ್ಡಿ ದರಗಳು

ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, ೧೯೪೯ರ ೨೧ ಮತ್ತು ೩೫ಎ ಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ತನ್ನ ಮಾರ್ಗದರ್ಶಕ ಸೂಚನೆ ಡಿಬಿಒಡಿ. ಸಂಖ್ಯೆ.ಡಿಐಆರ್.ಬಿಸಿ.೧೫೧/ಸಿ.೩೪೭/೮೫, ದಿನಾಂಕ ಡಿಸೆಂಬರ್ ೨೭, ೧೯೮೫ನ್ನು ಮಾರ್ಪಾಡು ಮಾಡಿ ಭಾರತೀಯ ರಿಸರ್ವ್ ಬ್ಯಾಂಕು, ದೇಶೀಯ ಮತ್ತು ಸಾಮಾನ್ಯ ಅನಿವಾಸಿ ಉಳಿತಾಯ ಠೇವಣಿಗಳ ಮೇಲಿನ ಹಾಗೂ ಅನಿವಾಸಿ (ಬಾಹ್ಯ) ಖಾತೆಗಳ ಯೋಜನೆಗಳ ಅಡಿಯಲ್ಲಿನ ಉಳಿತಾಯ ಖಾತೆಗಳ ಮೇಲಿನ ಬಡ್ಡಿ ದರವು ಏಪ್ರಿಲ್ ೧, ೨೦೦೦ ದಿಂದ ಜಾರಿಗೆ ಬರುವಂತೆ ವರ್ಷಕ್ಕೆ ಶೇ ೪.೦ ರಷ್ಟಿರುವುದ್ದು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯ ಮತ್ತು ವಿಹಿತ ಎಂದು ಮನಗಂಡು, ಬಡ್ಡಿ ದರವು ಶೇ. ೪.೦ರಷ್ಟಿರಬೇಕೆಂದು ಈ ಮೂಲಕ ನಿರ್ದೇಶಿಸುತ್ತದೆ.

೨. ಅದರಂತೆ ಮಾರ್ಗದರ್ಶಕ ಸೂಚನೆ ಡಿಬಿಒಡಿ.ಸಂಖ್ಯೆ.ಡಿಐಆರ್.ಬಿಸಿ.೧೫೧/ಸಿ.೩೪೭/೮೫ ದಿನಾಂಕ ಡಿಸೆಂಬರ್ ೨೭, ೧೯೮೫ ಇದರ ಅನುಬಂಧ-ಖ ಮತ್ತು ಅನುಬಂಧ-ಖಖ ನ್ನು ತಿದ್ದುಪಡಿ ಮಾಡತಕ್ಕದ್ದು. ಉಳಿದ ಎಲ್ಲ ಉಪಬಂಧಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

(ಜಿ.ಪಿ. ಮುನಿಯಪ್ಪನ್)
ಕಾರ್ಯನಿರ್ವಾಹಕ ನಿರ್ದೇಶಕ.

ಸ್ಲಿಪ್-೧೩
(ಸೂಚನೆಗಳ ಕೈಪಿಡಿಯ ಅಧ್ಯಾಯ ೯,
ಡಿಬಿಒಡಿ, ಡಿಬಿಎಸ್.ಐಇಸಿಡಿ.ಡಿಐಆರ್. ಬಿಸಿ ೧೫೭/೨೦೦೦)

## ಅನುಬಂಧ
## (ಅನುಬಂಧ-೧೧ಕ್ಕೆ)
## ಠೇವಣಿಗಳ ಮೇಲಿನ ಬಡ್ಡಿ ದರ
## (ದೇಶೀಯ, ಎನ್‌ಆರ್‌ಒ ಮತ್ತು ಎನ್‌ಆರ್‌ಇ ಠೇವಣಿಗಳು)

| ಖಾತೆಯ ಪ್ರವರ್ಗ | | ವರ್ಷಕ್ಕೆ ಶೇಕಡಾ ಪ್ರಮಾಣ |
|---|---|---|
| (೧) | ಚಾಲ್ತಿ ಖಾತೆ | ಇಲ್ಲ |
| (೨) | ಉಳಿತಾಯ ಖಾತೆ | ೪.೦ |
| (೩) | ಸಾವಧಿ ಠೇವಣಿಗಳು* ೧೫ ದಿವಸ ಮತ್ತು ಅದಕ್ಕೂ ಹೆಚ್ಚು | ಮುಕ್ತ |

* ಎನ್‌ಆರ್‌ಇ ಠೇವಣಿಗಳಿಗೆ ಕನಿಷ್ಠ ಅವಧಿ ತುಂಬುವ ಅವಧಿ ೬ ತಿಂಗಳುಗಳು.